ಪಿ ಡಬ್ಲ್ಯೂ:1

ದಿನಾಂಕ 23-11-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರಿ ಎನ್ ಜಿ ಬಿ ವಕೀಲರಿಂದಃ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡಂತೆ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ.

ದಿಃ 02-04-2016 ರ ಮೂಲ ಕ್ರಯ ಪತ್ರವನ್ನು **ನಿಪಿ 1** ಎಂದು, ದಿಃ 10-11-2021 ರಂದು ಪಿ ಡಿ ಓ ರವರಿಗೆ ನೀಡಿದ ಮನವಿಯ ಸ್ವೀಕೃತಿ ಪತ್ರವನ್ನು **ನಿಪಿ 2** ಎಂದು, ಎನ್ ಸಿ ಆರ್ ಅನ್ನು **ನಿಪಿ 3** ಎಂದು, ಖಾತ ಎಕ್ಸಟ್ರಾಕ್ಟ ಕಂಪ್ಯೂಟರ್ ಪ್ರತಿಗಳನ್ನು ನಿಪಿ 4 ಮತ್ತು 5 ಎಂದು, ಟ್ಯಾಕ್ಸ ರೀಜಿಸ್ಟರ್ ನ ಯತ ನಕಲನ್ನು **ನಿಪಿ 6** ಮತ್ತು **ನಿಪಿ 7** ಎಂದು, ಪಂಚಾಯತಿ ಸಭಾ ನಡವಳಿಕೆಯ ಧೃಢೀಕೃತ ನಕಲನ್ನು **ನಿಪಿ 8** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.